ಕರ್ನಾಟಕ ಮಾರಾಟ ತೆರಿಗೆ ಮತ್ತು ಕೆಲವು ಇತರ ಕಾನೂನಿನ (ತಿದ್ದುಪಡಿ) ವಿಧೇಯಕ, 1998

ಶ್ರೀ ಸಿದ್ಧರಾಮಯ್ಯ : (ಉಪಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, 1998ನೇ ಸಾಲಿನ ಕರ್ನಾಟಕ ಮಾರಾಟ ತೆರಿಗೆ ಮತ್ತು ಕೆಲವು ಇತರ ಕಾನೂನಿನ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, "1998ನೇ ಸಾಲಿನ ಕರ್ನಾಟಕ ಮಾರಾಟ ತೆರಿಗೆ ಮತ್ತು ಕೆಲವು ಇತರ ಕಾನೂನಿನ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು"

. ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಸಿದ್ಧರಾಮಯ್ಯ : (ಉಪಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, 1998ನೇ ಸಾಲಿನ ಕರ್ನಾಟಕ ಮಾರಾಟ ತೆರಿಗೆ ಮತ್ತು ಇತರ ಕೆಲವು ಇತರ ಕಾನೂನಿನ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಗಿದೆ.*

ಪರ್ಯಾಲೋಚನಾ ಪ್ರಸ್ತಾವ

ಕರ್ನಾಟಕ ಧನ ವಿನಿಯೋಗ (ನಂ. 1) ವಿಧೇಯಕ 1998

ಶ್ರೀ ಸಿದ್ಧರಾಮಯ್ಯ (ಉಪ ಮಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, 1998ನೇ ಸಾಲಿನ ಕರ್ನಾಟಕ ಧನ ವಿನಿಯೋಗ (ನಂ.1) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

+ ಶ್ರೀ ಸಿದ್ಧರಾಮಯ್ಯ : (ಉಪಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, ನಾನು ಬಜೆಟ್ ಮಂಡಿಸಿದಾಗ ಮೂರು ತಿಂಗಳಿಗೆ ಲೇಖಾನುದಾನವನ್ನು ಪಡೆದುಕೊಂಡಿದ್ದೆವು. ಸಭೆ ಮೂರು ತಿಂಗಳಿಗೆ ಒಪ್ಪಿಗೆ ಕೊಟ್ಟಿತು. ಈಗ 1998-99ನೇ ಸಾಲಿನಲ್ಲಿ ವಿವಿಧ ಬಾಬುಗಳಲ್ಲಿ ಖರ್ಚು ಮಾಡತಕ್ಕಂಥ ಹಣಕ್ಕೆ ಒಪ್ಪಿಗೆ ಕೊಡಬೇಕೆಂದು ಹೇಳಿ, ಧನ ವಿನಿಯೋಗ ಮಸೂದೆಯನ್ನು ಮಂಡಿಸಿದ್ದೇನೆ. ಎಲ್ಲಾ ಬೇಡಿಕೆಗಳ ಬಗ್ಗೆ ಈ ಬಾರಿ ಚರ್ಚೆಯಾಗಿದೆ. ಬಹಳ ಮುಖ್ಯವಾದಂತಹ ಇಲಾಖಾ ಬೇಡಿಕೆಗಳ ಮೇಲೆಲ್ಲಾ ಚರ್ಚೆಯಾಗಿ ಅದಕ್ಕೆ ಈ ಸದನ ಕೂಡ ಒಪ್ಪಿಗೆ ಕೊಟ್ಟಿದೆ. ಆದ್ದರಿಂದ ಅದರ ಎಲ್ಲಾ ವಿವರಗಳಿಗೆ ನಾನು ಹೋಗುವುದಿಲ್ಲ. ಆದ್ದರಿಂದ ಧನ ವಿನಿಯೋಗ ಮಸೂದೆಗೆ ಒಪ್ಪಿಗೆಕೊಡಬೇಕೆಂದು ಸದನವನ್ನು ಕೋರುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಅಧ್ಯಕ್ಷರೇ, ನಾನು ಇದರ ಬಗ್ಗೆ ದೀರ್ಘವಾಗಿ ಚರ್ಚೆಗೆ ಹೋಗುವುದಿಲ್ಲ. ಈ ಧನ ವಿನಿಯೋಗ ಮಸೂದೆ ಮೇಲೆ ಎಷ್ಟು ಚರ್ಚೆ ಮಾಡಬೇಕು ಎನ್ನುವುದು ಸ್ಪಷ್ಟವಾಗಿ ಇದೆ, ಅದು ನನಗೂ ಗೊತ್ತಿದೆ. ನನಗೆ ಇರುವ ಆತಂಕ ಒಂದೇ. ಐದೂವರೆ ಗಂಟೆಗಳ ಕಾಲ ಕೃಷಿ ಇಲಾಖೆಯ ಬೇಡಿಕೆಗಳ ಮೇಲಿನ ಚರ್ಚೆಗೆ ಉತ್ತರ ನೀಡಿದ ಮಾನ್ಯ ಬೈರೇಗೌಡರ ಭಾಷಣ ಕೇಳಿ ಹೂವೆಲ್ಲಾ ಅರಳಿ, ಹಣ್ಣೆಲ್ಲಾ ಮಾಗಿ, ಕೊನೆಗೆ ಆಗಿದ್ದೇನು ಗೊತ್ತಾ? ಹೂವು ಅರಳಿದವು, ಹಣ್ಣು ಮಾಗಿದವು, ಕೊನೆಗೆ ನೀರಿನ ಅಡಚಣೆಗೆ ಕೆಳಕ್ಕೆ ಬೀಳುವುದಕ್ಕೆ ಶುರುವಾಗಿವೆ. ಮಾನ್ಯ ಬೈರೇಗೌಡರು ಕೃಷಿ ನೀತಿಯನ್ನು ಪ್ರಕಟ ಮಾಡಿದ್ದರು. ಆ ಕೃಷಿ ನೀತಿಯನ್ನು ಪ್ರಕಟ ಮಾಡಿದ ಮೇಲೆ ಈಗ ಮೂರು ವರ್ಷವಾಗಿದೆ. ನೀವು ಇಂಥಿಂಥ ಕೆಲಸಗಳನ್ನು ಮಾಡುತ್ತೇವೆ ಎಂದು ಹೇಳಿದ್ದಿರಿ, ಅದನ್ನು ಮಾಡಿಲ್ಲವೆಂದು ವಿಶೇಷವಾಗಿ ನಾನು ಇವತ್ತು ಕೇಳುತ್ತಿದ್ದೇನೆ. ನಾನು ಬಾಕಿ ಬೇರೇನೂ ಕೇಳುವುದಕ್ಕೆ ಹೋಗುತ್ತಿಲ್ಲ. ಮೂರು ವರ್ಷಗಳಲ್ಲಿ ಪ್ರತಿ ವರ್ಷ ಸಾವಿರ ಕೋಟಿ ರೂಪಾಯಿಗಳಂತೆ ಮೂರು ಸಾವಿರ ಕೋಟಿ ರೂಪಾಯಿಗಳನ್ನು ಕೃಷಿ ಇಲಾಖೆಗೆ ತೊಡಗಿಸುತ್ತೇವೆಂದು ಕೃಷಿ ನೀತಿಯಲ್ಲಿ ಹೇಳಿದ್ದರು. ಆದರೆ ಒಂದು ಕಾಸೂ ತೊಡಗಿಸಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಕಾಗೋಡು ತಿಮ್ಮಪ್ಪನವರೇ, ರಾತ್ರಿಯೆಲ್ಲಾ ರಾಮಾಯಣ ಕೇಳಿ, ಬೆಳಿಗ್ಗೆ ರಾಮನಿಗೂ, ಸೀತೆಗೂ ಏನಾಯಿತು? ಎಂದು ಕೇಳಿದಂತಾಯಿತು.

ಶ್ರೀ ಸಿದ್ಧರಾಮಯ್ಯ : ಮಾನ್ಯ ಅಧ್ಯಕ್ಷರೇ, ಕೃಷಿ ಇಲಾಖೆಗೆ ಸುಮ್ಮನೆ ದುಡ್ಡು ಕೊಟ್ಟು ಬಿಡುವುದು ಅಂತಲ್ಲ. ರೈತರಿಗೆ ಬೇಕಾದಂತಹ ಆರ್ಥಿಕ ನೆರವು, ಉತ್ತಮವಾದಂತಹ ಬೀಜ ಒದಗಿಸಿ ಕೊಡುವಂಥಾದ್ದು, ಗೊಬ್ಬರ ಒದಗಿಸಿಕೊಡುವಂಥಾದ್ದು, ರೋಗ ರಹಿತ ಬೀಜಗಳನ್ನು ಒದಗಿಸಿ ಕೊಡುವಂಥಾದ್ದು, ಬೇಸಾಯಕ್ಕೆ ಬೇಕಾದ ಆರ್ಥಿಕ ನೆರವು ಒದಗಿಸಿಕೊಡುವುದು ಮುಖ್ಯ. ಅದು ಬಿಟ್ಟು ಸುಮ್ಮನೆ ಒಂದು ಸಾವಿರ ಕೋಟಿ ರೂಪಾಯಿಗಳನ್ನು ಕೊಡುವುದಲ್ಲ.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೇ, ಮಾನ್ಯ ಕಾಗೋಡು ತಿಮ್ಮಪ್ಪನವರು ತಪ್ಪು ತಪ್ಪಾಗಿ ಹೇಳಿರುವುದು ಕಡತಕ್ಕೆ ಹೋಗತಕ್ಕಂಥದ್ದು ಸರಿಯಲ್ಲ. ನಾವು ಹೇಳಿದ ಹಾಗೆಯೇ, ಪ್ರತಿ ವರ್ಷ ಕೂಡ ರೈತರಿಗೆ ಒಂದೊಂದು ಸಾವಿರ ಕೋಟಿ ರೂಪಾಯಿಗಳ ಸಾಲ ಒದಗಿಸತಕ್ಕಂಥ ವ್ಯವಸ್ಥೆಯಾಗಿದೆ. ಸಾಲ ಒದಗಿಸಿದರೆ ಅದು ಬಂಡವಾಳ ತೊಡಗಿಸಿದಂತಾಗುತ್ತದೆ. ಆ ಕೆಲಸವಾಗಿದೆ. ತಪ್ಪು ತಪ್ಪಾಗಿ ಹೇಳಿರುವ ಮಾಹಿತಿ ಕಡತಕ್ಕೆ ಹೋಗತಕ್ಕದ್ದು ಸರಿಯಲ್ಲ. ನಾವು ಆ ಕೆಲಸವನ್ನು ಮಾಡಿದ್ದೇವೆ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಮಾನ್ಯ ಅಧ್ಯಕ್ಷರೇ, ಈಗ ಇಲ್ಲಿ ಬಿಲ್ ಕೊಡುವುದು, ಅದನ್ನು ವೋಟ್‌ಗೆ ಹಾಕುವುದು. ಇದು ಸರಿಯಲ್ಲ.

ಅಧ್ಯಕ್ಷರು : ಅಪ್ರೋಪ್ರಿಯೇಷನ್ ಬಿಲ್ಲನ್ನು ಈಗಲೇ ಕೊಡುವುದು.

ಶ್ರೀ ಸಿದ್ಧರಾಮಯ್ಯ : ಇದು ಅಪ್ರೋಪ್ರಿಯೇಷನ್ ಬಿಲ್. ಈಗಾಗಲೇ ಎಲ್ಲಾ ಬೇಡಿಕೆಗಳ ಮೇಲೆ ಇಲ್ಲಿ ಚರ್ಚೆಯಾಗಿದೆ. ಮಾನ್ಯ ಪ್ರಮೀಳಾರವರು 2-3 ಬೇಡಿಕೆಗಳ ಮೇಲೆ ಮಾತನಾಡಿ

ಬಹಳ ಒಳ್ಳೊಳ್ಳೆಯ ಸಲಹೆಗಳನ್ನು ಕೊಟ್ಟಿದ್ದೀರಿ ಅದನ್ನೆಲ್ಲಾ ಕನ್‌ಸಾಲಿಡೇಟ್ ಮಾಡಿ ಈ ಅಪ್ರೋಪ್ರಿಯೇಷನ್ ಬಿಲ್ ತಂದಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಇವತ್ತು 50 ಬೇಡಿಕೆಗಳನ್ನು ನಾಲ್ಕು ಗಂಟೆಯೊಳಗಾಗಿ ಸಂಪೂರ್ಣವಾಗಿ ಮುಗಿಸಿದ್ದೇವೆ. ಕರ್ನಾಟಕದ ಇತಿಹಾಸದಲ್ಲೇ ಇದೊಂದು ಚರಿತ್ರಾರ್ಹವಾದ ದಿನ.

ಶ್ರೀ ಸಿದ್ಧರಾಮಯ್ಯ : ಮಾನ್ಯ ಅಧ್ಯಕ್ಷರೇ, ಎಲ್ಲಾ ಬೇಡಿಕೆಗಳಿಗೂ ಒಪ್ಪಿಗೆ ಕೊಟ್ಟ ಮೇಲೆ ಈ ಬಿಲ್ ಮೇಲೆ ಚರ್ಚೆ ಏನು ಮಾಡುವುದಿದೆ?

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಅಧ್ಯಕ್ಷರೇ, ನಾವು ಒಪ್ಪಿಗೆ ಕೊಟ್ಟಿಲ್ಲವೆಂದು ಹೇಳುತ್ತಿಲ್ಲ. ಪ್ರತಿ ತಿಂಗಳು ನಮಗೆ ಎಷ್ಟು ದುಡ್ಡು ಕೊಡಬೇಕೋ ಅಷ್ಟನ್ನು ದಯವಿಟ್ಟು ಬಿಡುಗಡೆ ಮಾಡಿ. ನೀವು ಆ ಹಣವನ್ನು ಜೇಬಿನಲ್ಲಿ ಇಟ್ಟುಕೊಂಡು ಕುಳಿತರೆ ನಮಗೆ ತುಂಬಾ ತೊಂದರೆಯಾಗುತ್ತದೆ.

ಶ್ರೀ ಸಿದ್ಧರಾಮಯ್ಯ : ಬಜೆಟ್‌ನಲ್ಲಿ ನೀವು ಪಾಸ್ ಮಾಡಿರತಕ್ಕಂಥ ಹಣವನ್ನು ಯಾವುದನ್ನೂ ಸರ್ಕಾರ ಇಟ್ಟುಕೊಳ್ಳುವುದಿಲ್ಲ. ಎಲ್ಲವನ್ನೂ ನಾವು ಕೊಟ್ಟಿದ್ದೇವೆ. ಅದು ಇರಿಗೇಷನ್ ಇರಬಹುದು ಎಜುಕೇಷನ್ ಇರಬಹುದು. ರೂರಲ್ ಡೆವಲಪ್‌ಮೆಂಟ್‌ಗೆ ಪ್ರತಿ ತಿಂಗಳು ಹನ್ನೆರಡನೇ ಒಂದು ಭಾಗದಷ್ಟು ಹಣ ಬಿಡುಗಡೆ ಮಾಡುತ್ತಿದ್ದೇವೆ. ಕುಡಿಯುವ ನೀರಿಗೆ ಮೂರು ತಿಂಗಳು ಮುಂಚಿತವಾಗಿ ಬಿಡುಗಡೆ ಮಾಡುತ್ತಿದ್ದೇವೆ. ಆದ್ದರಿಂದ ಅದರ ಬಗ್ಗೆ ಯಾರು ಸಂಶಯ ಇಟ್ಟುಕೊಳ್ಳಬೇಡಿ. ನಮ್ಮ ಸರ್ಕಾರ ಬಂದ ಮೇಲೆ ರೂರಲ್ ಡೆವಲಪ್‌ಮೆಂಟ್ ಇಲಾಖೆಗೆ ಪ್ರತಿ ತಿಂಗಳು ತಪ್ಪದೇ ಹನ್ನರಡನೇ ಒಂದು ಭಾಗದಷ್ಟು ಹಣ ಬಿಡುಗಡೆ ಮಾಡುತ್ತಿದ್ದೇವೆ. ಈ ರೀತಿ ಹಣ ಬಿಡುಗಡೆ ಮಾಡುತ್ತಿರುವ ಮೊದಲನೇ ಸರ್ಕಾರ ಇದು. ಪಿ. ಡಬ್ಲ್ಯೂ.ಡಿ. ಮತ್ತು ಇರಿಗೇಷನ್‌ಗೆ ಬಜೆಟ್‌ನಲ್ಲಿ ಎಷ್ಟು ಹಣ ಇಟ್ಟಿದ್ದೆವೋ ಅಷ್ಟೂ ಹಣವನ್ನು ಬಿಡುಗಡೆ ಮಾಡಿದ್ದೇವೆ. ಹೆಚ್ಚುವರಿ ಕೆಲಸ ಮಾಡಿರುವಂತಾದ್ದು ಪೆಂಡಿಂಗ್ ಬಿಲ್ಸ್ ಇವೆ ಎಂದು ಹೇಳುತ್ತಿದ್ದಾರೆ. ಅದನ್ನೂ ಕೊಡತಕ್ಕಂಥ ಕೆಲಸ ಮಾಡುತ್ತೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಆರ್ಥಿಕ ಮಂತ್ರಿಗಳು ಇಷ್ಟಾದರೂ ಒಂದು ಕೆಲಸ ಮಾಡಿ. ಈ ಸಣ್ಣ ಕೈಗಾರಿಕೆಗಳಿಗೆ ಸಬ್ಸಿಡಿ ಬರದೇ ಇರುವಂತಹವರು ನನ್ನ ಬಳಿಗೆ ಕೆಲವರು ಬಂದಿದ್ದರು. ಅಧಿಕಾರಿಗಳ ಜೊತೆಗೆ ಈ ಬಗ್ಗೆ ನಾನು ಮಾತನಾಡಿದಾಗ ಮೊದಲನೇ ಕಂತಾಗಿ ಶೇಕಡ 50 ರಷ್ಟು ಹಣವನ್ನು ನಾವು ಕೊಟ್ಟಿದ್ದೇವೆ. ಉಳಿದ 2-3 ವರ್ಷಗಳದ್ದು ಹಣವಿಲ್ಲದ್ದರಿಂದ ಬಿಡುಗಡೆ ಮಾಡಿಲ್ಲವೆಂದು ಹೇಳುತ್ತಾರೆ. ದಯಮಾಡಿ ಆ ಹಣ ಬಿಡುಗಡೆ ಮಾಡಿ. ಸಣ್ಣ ಕೈಗಾರಿಕೆಗಳವರು ಅನೇಕ ಕಾರಣಗಳಿಗೋಸ್ಕರ ಇವತ್ತು ಮುಳುಗಿ ಹೋಗುವಂತಹ ಪರಿಸ್ಥಿತಿಗೆ ಬಂದಿದ್ದಾರೆ. 2-3 ವರ್ಷಗಳಾದರೂ ಬಿಡುಗಡೆಯಾಗದಿರುವ ಉಳಿದ ಶೇಕಡ 50 ರಷ್ಟು ಹಣವನ್ನು ಬಿಡುಗಡೆ ಮಾಡಿ ಅವರಿಗೆ ಸಿಗುವಂತಹ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಜೆ.ಹೆಚ್. ಪಟೇಲ್ : ಸಣ್ಣ ಕೈಗಾರಿಕೆಗಳ ಸಮಸ್ಯೆ ಬರೀ ಸಬ್ಸಿಡಿದಲ್ಲ. ಸಣ್ಣ ಕೈಗಾರಿಕೆಗಳ ಸಮಸ್ಯೆ ರಾಷ್ಟ್ರೀಯ ಸಮಸ್ಯೆಯಾಗಿದೆ. ಯಾವಾಗ ನಾವು ಮಲ್ಟಿ ನ್ಯಾಷನಲ್ಸ್‌ಗೆ ಚಿಪ್ಸ್ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದೇವೆ. ಇಂತಹ ಕಾರಣಗಳಿಂದಾಗಿಯೇ ಅವು ಸಾಯುತ್ತಿವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಹೇಳುತ್ತಿರುವುದು ಬೇರೆ ವಿಷಯ. ಸಬ್ಸಿಡಿ ಹಣವನ್ನು ಶೇಕಡ 50 ರಷ್ಟು ಕೊಟ್ಟಿದ್ದೀರಿ. 2-3 ವರ್ಷಗಳಾದರೂ ಉಳಿದ ಹಣ ಅವರಿಗೆ ಪಾವತಿ ಮಾಡಿಲ್ಲ. ಅದನ್ನು ಬಿಡುಗಡೆ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ? ಎಂದು ನಾನು ಕೇಳುತ್ತಿದ್ದೇನೆ.

ಶ್ರೀ ಸಿದ್ಧರಾಮಯ್ಯ : ಮಾನ್ಯ ಅಧ್ಯಕ್ಷರೇ, ಇದು ಕಳೆದ ವರ್ಷ ಅಥವಾ ಈ ವರ್ಷ ಅಕ್ಯುಮಲೇಟ್ ಆಗಿರತಕ್ಕಂಥ ಹಣವಲ್ಲ. ಸುಮಾರು ವರ್ಷಗಳಿಂದಲ್ಲ ಬಾಕಿ ಇದ್ದು ಈಗ ಅದು 220 ಕೋಟಿ ರೂಪಾಯಿಗಳಾಗಿದೆ. ನಿನ್ನೆ ನಮ್ಮ ಮಾನ್ಯ ಕೈಗಾರಿಕಾ ಸಚಿವರು ಆ ಬಗ್ಗೆ ಇಲ್ಲಿ ಹೇಳಿಕೆ ನೀಡಿದ್ದಾರೆ. ಮುಂದಿನ ನಾಲ್ಕು ವರ್ಷಗಳಲ್ಲಿ ಈ ಹಣ ಬಿಡುಗಡೆ ಮಾಡುತ್ತೇವೆ. ಈ ವರ್ಷ ಬಾಕಿ ಇರುವ ಒಟ್ಟು ಹಣದ ನಾಲ್ಕನೇ ಒಂದು ಭಾಗದಷ್ಟು ಹಣವನ್ನು ಬಿಡುಗಡೆ ಮಾಡುತ್ತೇವೆ. ಓವರ್ ದಿ ಪೀರಿಯಡ್ ಇದನ್ನು ರಿಲೀಸ್ ಮಾಡುತ್ತೇವೆ.

ಶ್ರೀ ಕೆ.ಎಸ್. ಈಶ್ವರಪ್ಪ : ಕೈಗಾರಿಕೆಗಳೆಲ್ಲವೂ ಮುಚ್ಚಿ ಹೋಗಿವೆ, ಇನ್ನೆರಡು ತಿಂಗಳುಗಳಲ್ಲಾದರೂ ಹಣ ಬಿಡುಗಡೆ ಮಾಡುತ್ತೀರಾ?

ಶ್ರೀ ಸಿದ್ಧರಾಮಯ್ಯ : ನಾನು ಇಲ್ಲಿ ತಪ್ಪು ಬೇಡಿಕೆ ಹೇಳಿಕೆ ನೀಡಲು ಇಷ್ಟವಿಲ್ಲ. ಇದರ ಬಗ್ಗೆ ಆಗಲೇ ಹೇಳಿದ್ದೇನೆ, ಜೊತೆಗೆ ಮೊಯಿದ್ದೀನ್‌ರವರೂ ಕೂಡ ಹೇಳಿದ್ದಾರೆ. ಉಳಿದಿರ ತಕ್ಕಂಥ ಬಾಕಿ ಹಣವನ್ನು ನಾಲ್ಕು ಕಂತುಗಳಲ್ಲಿ ಬಿಡುಗಡೆ ಮಾಡುತ್ತೇವೆ. ಮೊದಲನೆಯ ಕಂತನ್ನು ಈ ವರ್ಷದ ಅಂತ್ಯದೊಳಗೆ ಬಿಡುಗಡೆ ಮಾಡುತ್ತೇವೆ.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಟಿ.ಬಿ. ಜಯಚಂದ್ರರವರು ವಿಧೇಯಕದ ಮೇಲೆ ಮಾತನಾಡಲು ಎದ್ದು ನಿಂತರು)

ಶ್ರೀ ಎಂ.ಸಿ. ನಾಣಯ್ಯ : ನಿಜವಾಗಿಯೂ ಅಪ್ರೋಪ್ರಿಯೇಷನ್ ಬಿಲ್ ಮೇಲೆ ಚರ್ಚೆ ಮಾಡುವ ಹಾಗಿಲ್ಲ. ಎಲ್ಲಾ ಬೇಡಿಕೆಗಳಿಗೂ ಅಂಗೀಕಾರ ಕೊಟ್ಟ ಆನಂತರ ಸದರಿ ಬಿಲ್ ಬಗ್ಗೆ ಚರ್ಚೆ ಮಾಡುತ್ತಿದ್ದೀರಲ್ಲಾ, ನೀವು ಹೊಸ ಇತಿಹಾಸವನ್ನು ಸೃಷ್ಟಿ ಮಾಡಬೇಡಿ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ, ಪ್ಲಾನ್ ಎಕ್ಸ್‌ಪೆಂಡೀಚರ್‌ಗಿಂತ ನಾನ್ ಪ್ಲಾನ್ ಎಕ್ಸ್‌ಪೆಂಡಿಚರ್ ಜಾಸ್ತಿ ಆಗುತ್ತಿರುವುದರ ಬಗ್ಗೆ ಹೇಳುತ್ತಿದ್ದೇನೆ. ಸುಮಾರು ಎರಡು ದಿವಸಗಳ ಕಾಲ ಇದರ ಬಗ್ಗೆ ಚರ್ಚೆ ಮಾಡಬೇಕಾಗಿತ್ತು, ಇದರಿಂದ ಸರ್ಕಾರಕ್ಕೆ ಸಹಾಯವಾಗುತ್ತದೆನ್ನುವ ದೃಷ್ಟಿಯಿಂದ ಹೇಳುತ್ತಿದ್ದೇನೆ. ಪ್ಲಾನ್ ಎಕ್ಸ್‌ಪೆಂಡಿಚರ್‌ಗಿಂತ ನಾನ್-ಪ್ಲಾನ್ ಎಕ್ಸ್‌ಪೆಂಡಿಚರ್ ಜಾಸ್ತಿಯಾಗುತ್ತಿದ್ದು, ಅಭಿವೃದ್ಧಿ ಕಾರ್ಯಗಳಿಗೆ ಇವೊತ್ತು ಹಣವಿಲ್ಲದಿರುವ ಸಂದರ್ಭಗಳಿರುವಾಗ

ನಿಮಗೆ ಅನುಕೂಲವಾಗಲೆನ್ನುವ ದೃಷ್ಟಿಯಿಂದ ಸಲಹೆ ಕೊಡುತ್ತಿದ್ದೇನೆ. ಈಗ ಮುಗಿಯಿತು ಆದರೆ, ಮುಂದೆ ಬರುವ ಸಂದರ್ಭದಲ್ಲಾದರೂ ಇದರ ಬಗ್ಗೆ ಎಚ್ಚರ ವಹಿಸಬೇಕು.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, "1998ರ ಕರ್ನಾಟಕ ಧನ ವಿನಿಯೋಗ (ನಂ. 1) ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನು ಪರ್ಯಾಯಲೋಚಿಸುವುದು

ಖಂಡ 2 ಮತ್ತು 3

ಅಧ್ಯಕ್ಷರು : ಖಂಡ 2 ಮತ್ತು 3 ಈ ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ಮತ್ತು 3 ನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ 'ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಸಿದ್ದರಾಮಯ್ಯ (ಹಣಕಾಸು ಸಚಿವರು) ಮಾನ್ಯ ಅಧ್ಯಕ್ಷರೇ, 1998ರ ಕರ್ನಾಟಕ ಧನ ವಿನಿಯೋಗ (ನಂ.1) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, '1998ರ ಕರ್ನಾಟಕ ಧನ ವಿನಿಯೋಗ (ನಂ.1) ವಿಧೇಯಕವನ್ನು ಅಂಗೀಕರಿಸುವುದು.

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ಕರ್ನಾಟಕ ಮಾರಾಟ ತೆರಿಗೆ (ತಿದ್ದುಪಡಿ) ವಿಧೇಯಕ, 1998

ಪರ್ಯಾಲೋಚನಾ ಪ್ರಸ್ತಾವ